**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 2111/2024**

**ಫಿರ್ಯಾದುದಾರರುಃ** ಕರಾವಳಿ ಸೌಹಾರ್ದ ಸಹಕಾರಿ ಸಂಘ ನಿ. ಭಟ್ಕಳ.
ಸದ್ರಿ ಸಂಘವನ್ನು ಪ್ರತಿನಿಧಿಸುವವರು ಇದರ ವ್ಯವಸ್ಥಾಪಕರು,
ಶ್ರೀ ದಾಸ ಶಂಕರ ದೇವಾಡಿಗ.

**- ವಿರುದ್ಧ -**

**ಆರೋಪಿತರುಃ** ಶ್ರೀ. ಆನಂದ ರಾಮ ಗೊಂಡ,
ವಯಸ್ಸುಃ 34 ವರ್ಷ,
ಸಾಃ ಗೊಜ್ಜರಮನೆ, ಬೆಂಗ್ರೇ-01, ಉಲ್ಮಾನ್,
ಕಾಯ್ಕಿಣಿ, ಭಟ್ಕಳ-581320.

**ಆಪಾದನೆ**

ಆರೋಪಿಯಾದ ನೀವು ದಿನಾಂಕಃ 07-09-2022 ರಂದು ಪಿರ್ಯಾದಿ ಸಂಘದಿಂದ ರೂ. 1,30,000/- (ರೂಪಾಯಿ ಒಂದು ಲಕ್ಷದ ಮೂವತ್ತು ಸಾವಿರ ಮಾತ್ರ) ಹಣವನ್ನು ವ್ಯವಹಾರ ಸಾಲವಾಗಿ ಪಡೆದುಕೊಂಡಿದ್ದು ಇರುತ್ತದೆ. ವಾರ್ಷಿಕ ಶೇಕಡಾ 15% ಬಡ್ಡಿ ದರದಲ್ಲಿ ಮರುಪಾವತಿ ಮಾಡುವುದಾಗಿ ಸಾಲದ ಕರಾರು, ಡಿಮ್ಯಾಂಡ್ ಪ್ರಾಮಿಸರಿ ನೋಟ್ ಮತ್ತು ಇತರೇ ಕಾಗದ ಪತ್ರಗಳನ್ನು ಬರೆದುಕೊಟ್ಟಿದ್ದು ಇರುತ್ತದೆ. ಆದರೆ ಸದ್ರಿ ಸಾಲದ ಹಣವನ್ನು ಮರುಪಾವತಿ ಮಾಡವಲ್ಲಿ ವಿಫಲರಾಗಿರುತ್ತೀರಿ. ನಂತರ ಸದ್ರಿ ಸಾಲವನ್ನು ಮರುಪಾವತಿ ಮಾಡುವಂತೆ ಪಿರ್ಯಾದುದಾರರು ನಿಮ್ಮಲ್ಲಿ ಕೇಳಿಕೊಂಡಾಗ, ಸದ್ರಿ ಸಾಲವನ್ನು ಮರುಪಾವತಿಸುವ ಸಲುವಾಗಿ ನೀವು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಮುರ್ಡೇಶ್ವರ ಶಾಖೆಯ ಚೆಕ್ ನಂಬರ್ 02000770 ನ್ನು ರೂ. 35,000/-( ರೂಪಾಯಿ ಮೂವತ್ತೈದು ಸಾವಿರ ಮಾತ್ರ) ಕ್ಕೆ ದಿನಾಂಕಃ 30-05-2024 ರ ಚೆಕ್ಕನ್ನು ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸಂಸ್ಥೆಯವರು ಅವರ ವ್ಯವಹಾರದ ಬ್ಯಾಂಕರಾದ ಫೆಡರಲ್ ಬ್ಯಾಂಕ್, ಭಟ್ಕಳ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ,"Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 31-05-2024 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 28-06-2024 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ಅಂಚೆ ಮೂಲಕ ನಿಮಗೆ ಕಳುಹಿಸಿದ್ದು, ಸದ್ರಿ ಚೆಕ್ಕಿನಲ್ಲಿ ನಮೂದಿಸಿರುವ ಹಣವನ್ನು ನೋಟಿಸು ತಲುಪಿದ ನಿಗದಿತ ಅವಧಿಯೊಳಗೆ ಸಂದಾಯ ಮಾಡುವಂತೆ ತಿಳಿಸಿದ್ದು , ಸದ್ರಿ ನೋಟಿಸ್ಸನ್ನು ನೀವು ದಿನಾಂಕಃ 19-07-2024 ರಂದು ಸ್ವೀಕರಿಸಿರುತ್ತೀರಿ. ಆದರೆ ಇಂದಿನವರೆಗೂ

ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ — ವಿಚಾರಣೆಯಾಗಬೇಕು

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ಸಹಿ ಇದೆ/–

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 18–12–2025. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.